ಈ ಕೆಳಗಿನ ಯಾವುದೇ ವಿಷಯ ಕುರಿತು ವಿಚಾರಗಳನ್ನು ಮಂಡಿಸಬಹುದು.

Who are the backward castes and communities?
Problems of categorization of backward castes?
Court verdicts on SEBCS (Social educationally and economically backwards)
Kaka Kalelkar commission and its recommendations
B.P. Mandal commission and its recommendations.
Backward class commission in Karnataka
Miller Committee
**Dr. Naganagowda** committee
**Havanoor** commission
**Venkataswamy** commission
**Chinnappa reddy** commission
**Dwarakanath and Prof. Ravivarma** committee and their recommendations
Social integrated and political polarization of backwards and minorities
Politics of AHINDA in Karnataka
Backward class political leadership in Karnataka – D.Devaraja Urs and Siddaramaiah – their vision and strategies
Contemporary issues of backward classes in the era of globalization.
Any other topic strictly relevant to the theme of the seminar

## Call for Papers:

Abstracts (300words) and full papers (2000-3000words) can be submitted through email in the word format to publicadmn.obc@gmail.com. Submission of full paper is compulsory. The research papers shall be preferably in the standard research format, abstract, introduction, objectives, hypothesis if any, methodology, results /findings, conclusion, references in that order. Expert committee will short list the selected papers.

**Publication:** Papers can be submitted in Kannada/English. Selected full papers will be reviewed and published in the form of edited book with ISBN number after the seminar.

## Important Dates

| | |
|---|---|
| (1) Abstract Submission | : 20/12/2017 |
| (2) Notification of Acceptance of Papers | : 23/12/2017 |
| (3) Final Paper Submission | : 25/01/2018 |
| (4) Registration: on or before | : 3/02/2018 |

## Registration fee

| | |
|---|---|
| Paper Presentation and publication | : 1000 |
| Faculty and others | : 400 |
| Research Scholars | : 300 |

## *Chief Patron*

**Prof. C.Basavaraju I/C**
Vice Chancellor
University of Mysore, Mysuru.

## *Patrons*

**Smt.D.Bharathi**
Registrar
University of Mysore
Mysuru.

**Prof.J.Somashekar**
Registrar (Evaluation)
University of Mysore
Mysuru.

## *Advisory Committee*

**Prof. C. Basavaraju,** Vice Chancellor, University of Mysore, Mysuru
**Smt. D. Bharathi,** Registrar, University of Mysore, Mysuru
**Prof. J. Somashekar,** Registrar (Evaluation), University of Mysore
**Prof. Mahadevappa,** Finance Officer, University of Mysore,
**Dr. Umesh.T.K,** Professor, University of Mysore, Mysuru
**Dr. Aisha M. Sheriff,** Professor, University of Mysore, Mysuru
**Dr. Ningamma Betsur,** Professor, University of Mysore, Mysuru
**Dr. Suresh Benjamin.M.** Director, Directorate of Social Welfare, University of Mysore, Mysuru
**Sri. D.K.Srinivas,** Associate Professor, University of Mysore
**Dr. K.Shivachithappa,** Professor, University of Mysore, Mysuru
**Dr. S. Shivarajappa,** Professor, University of Mysore, Mysuru
**Dr. Indumati,** Professor, University of Mysore, Mysuru
**Dr. Hemanthkumar.G.** Professor, University of Mysore, Mysuru
**Dr. K.V.Aiyanna,** Professor, University of Mysore, Mysuru
**Dr. N. Saraswathi,** Professor, University of Mysore, Mysuru

## *Seminar Convener*

**Dr. Dayananda A Mane**
Professor and Chairman
Dos in Public Administration
University of Mysore, Mysuru.
99002441898

## *Co-Convener*

**Govindaraju.H**
Guest Faculty,
DOS in Public Administration
University of Mysore, Mysuru.
9972575784

**Ramya.Y.N.**
Guest Faculty,
DOS in Public Administration
University of Mysore, Mysuru.
8722725610

## *Organizing Committee*

Asst. Prof. Somashekhar.C.L.
Santhosh.K.B. Guest Faculty
Arjun. Research Scholar
Shrungar.K.S. Research Scholar
Asst. Prof. Praveen Mellalli.
Anitha.M. Research Scholar
Veena .R. Research Scholar
Karthik Kumar. Research Scholar





ಮೈಸೂರು ವಿಶ್ವವಿದ್ಯಾನಿಲಯ
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು – 570 006.

# ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಮತ್ತು ನಾಯಕತ್ವ

ದಿನಾಂಕ 09 ಮತ್ತು 10–02–2018ರಂದು
ಎರಡು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ



## ಮೈಸೂರು ವಿಶ್ವವಿದ್ಯಾನಿಲಯದ ಅವಲೋಕನ

ಮೈಸೂರು ವಿಶ್ವವಿದ್ಯಾನಿಲಯವು 1916 ಜುಲೈ 27ರಂದು ಮೈಸೂರಿನ ದಿವಾನರಾಗಿದ್ದ **ಸರ್.ಎಂ. ವಿಶ್ವೇಶ್ವರಯ್ಯರವರ** ದೂರದೃಷ್ಟಿಯ ಫಲವಾಗಿ ಥಾಮಸ್ ಡೆನ್ಹಾಮ್ ಮತ್ತು ಸಿ.ಆರ್.ರೆಡ್ಡಿ ಅವರ ಅಮೇರಿಕಾ ಪ್ರವಾಸದ ನಂತರ ಸಲ್ಲಿಸಿದ ವರದಿಯ ಆಧಾರದ ಮೇಲೆ ಈ ವಿಶ್ವವಿದ್ಯಾನಿಲಯವನ್ನು ಮಹಾರಾಜರು ಸ್ಥಾಪಿಸಿದರು. ಮುಖ್ಯವಾಗಿ ಷಿಕಾಗೋ ವಿಶ್ವವಿದ್ಯಾನಿಲಯ, ವಿಸಾನ್ಸಿನ್ ವಿಶ್ವವಿದ್ಯಾನಿಲಯ, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳ ರಚನೆ ಮತ್ತು ಆಡಳಿತಗಳ ತಳಹದಿಯ ಮೇಲೆ ಮೈಸೂರು ವಿಶ್ವವಿದ್ಯಾನಿಲಯವು ರೂಪುಗೊಂಡಿದೆ. ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರೋತ್ಸಾಹದಿಂದ ವಿಶ್ವವಿದ್ಯಾನಿಲಯವು ಭಾರತದಲ್ಲಿಯೇ ಅಪ್ರತಿಮ ವಿದ್ಯಾಕೇಂದ್ರಗಳಲ್ಲಿ ಒಂದಾಗಿದೆ.

ಆಧುನಿಕ ಮೈಸೂರು ನಿರ್ಮಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಣಿಕೆ ಬಹಳ ದೊಡ್ಡದು. 'ನಹೀ ಜ್ಞಾನೇನ ಸದೃಶ್ಯಂ' ಎಂಬುದು ವಿಶ್ವವಿದ್ಯಾನಿಲಯದ ಧ್ಯೇಯವಾಕ್ಯವಾಗಿದ್ದು ಅಂದರೆ 'ಜ್ಞಾನಕ್ಕೆ ಸಮಾನವಾದದ್ದು ಯಾವುದೂ ಇಲ್ಲ' ಎಂದರ್ಥ. ಇದನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಈ ಲಾಂಛನದ ತಳಭಾಗದಲ್ಲಿ 'ಸತ್ಯಮೇವೋದ್ಧರಾಮ್ಯಹಂ' ಎಂಬ ಸಂಸ್ಕೃತ ನುಡಿ ಇದೆ. ಅಂದರೆ ನಾನು ಯಾವಾಗಲೂ ಸತ್ಯವನ್ನೇ ಎತ್ತಿ ಹಿಡಿಯುತ್ತೇನೆ ಎಂಬುದಾಗಿದೆ. ಈ ವಿಶ್ವವಿದ್ಯಾನಿಲಯದಲ್ಲಿ ಧೀಮಂತ ವಿದ್ವಾಂಸರಾದ ಕುವೆಂಪು, ಡಾ.ರಾಧಾಕೃಷ್ಣನ್, ಕಾರ್ಯನಿರ್ವಹಿಸಿ ಪ್ರಸಿದ್ಧಿ ಪಡೆದಿದೆ. ಈ ವಿಶ್ವವಿದ್ಯಾನಿಲಯದಲ್ಲಿ ಧೀಮಂತ ವಿದ್ವಾಂಸರಾದ ಕುವೆಂಪು, ಡಾ.ರಾಧಾಕೃಷ್ಣನ್, ಕಾರ್ಯನಿರ್ವಹಿಸಿ ಪ್ರಸಿದ್ಧಿ ಪಡೆದಿದೆ. ಈ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಯಾಗಿ ಪ್ರೊ.ಎಚ್.ವಿ. ನಂಜುಂಡಯ್ಯರವರು ನೇಮಕವಾಗಿದ್ದು ನಂತರ ರಾಷ್ಟ್ರಕವಿ ಕುವೆಂಪು, ಪ್ರೊ. ದೇ.ಜ.ಗೌ., ಪ್ರೊ. ಮಾದಯ್ಯ, ಪ್ರೊ. ತಳವಾರ್, ಪ್ರೊ. ರಂಗಪ್ಪ, ಮತ್ತು ಪ್ರಭಾರ ಕುಲಪತಿಯಾಗಿ ಪ್ರೊ. ದಯಾನಂದ ಎ. ಮಾನೇರಂತಹ ಕುಲಪತಿಗಳು ಕಾರ್ಯನಿರ್ವಹಿಸಿದ್ದು ಇವರುಗಳ ಸಾಧನೆಗಳಿಂದ ಇಂದು ಮೈಸೂರು ವಿಶ್ವವಿದ್ಯಾನಿಲಯವು, ಭಾರತದಲ್ಲಿ 778 ವಿಶ್ವವಿದ್ಯಾನಿಲಯಗಳ ಪೈಕಿ 36ನೇ ಸ್ಥಾನ ಪಡೆದಿದ್ದು, ಘನತೆವೆತ್ತ ರಾಷ್ಟ್ರಪತಿಗಳು ಏಪ್ರಿಲ್ 10, 2017ರಂದು ರಾಷ್ಟ್ರಪತಿ ಭವನದಲ್ಲಿ ಕುಲಪತಿಗಳಾದ ಪ್ರೊ. ದಯಾನಂದ ಮಾನೆ ಇವರಿಗೆ ಪ್ರಶಸ್ತಿ ಪ್ರಧಾನ ಮಾಡಿರುವುದು ಹೆಮ್ಮೆಯ ಸಂಗತಿ. ರಾಜ್ಯದ 25 ವಿಶ್ವವಿದ್ಯಾನಿಲಯಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕಾಯ್ದುಕೊಂಡ ಪ್ರಥಮ ವಿಶ್ವವಿದ್ಯಾನಿಲಯವಾಗಿದೆ.

## ಮೈಸೂರು ವಿಶ್ವವಿದ್ಯಾನಿಲಯದ ಸಾರ್ವಜನಿಕ ಆಡಳಿತ ವಿಭಾಗದ ಪರಿಚಯ

ಮೈಸೂರು ವಿಶ್ವವಿದ್ಯಾನಿಲಯವು ಶತಮಾನೋತ್ಸವದ ಪ್ರಯುಕ್ತವಾಗಿ ಐದು ವಿಭಾಗಗಳನ್ನು ಹೊಸ ವಿಭಾಗಗಳಾಗಿ ಸ್ಥಾಪನೆ ಮಾಡಿದ್ದು ಇದರಲ್ಲಿ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗವೂ ಒಂದಾಗಿರುತ್ತದೆ. ಇದು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2010ರಲ್ಲಿ ಪ್ರಾರಂಭವಾಗಿ ಕಾರ್ಯಾರಂಭವನ್ನು ಮಾಡಿತು. ನಂತರ ವಿದ್ಯಾರ್ಥಿಗಳ ಹೋರಾಟದ ಫಲವಾಗಿ ದಿನಾಂಕ 09–07–2015ರಂದು ಪ್ರತ್ಯೇಕ ವಿಭಾಗವಾಗಿ BOS ಮಂಡಳಿ, BOE ಮಂಡಳಿ, ಹಾಗೂ M.A. M.Phil. Ph.D. ಪದವಿಗಳನ್ನು ಪ್ರತ್ಯೇಕವಾಗಿ ನೀಡಲಾಗುತ್ತಿದೆ. ಪ್ರಸ್ತುತ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಸಂಸ್ಥಾಪಕರು ಆದಂತಹ ಪ್ರೊ. ದಯಾನಂದ ಎ.ಮಾನೆಯವರು ವಿಭಾಗದ ಮುಖ್ಯಸ್ಥರಾಗಿದ್ದಾರೆ.

## ಎರಡು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

ಭಾರತದಲ್ಲಿ ಶ್ರೇಣೀಕೃತ ವ್ಯವಸ್ಥೆಯಿಂದಾಗಿ ಸಮಾಜದ ಕೆಳಸ್ತರದಲ್ಲಿರುವ ಜಾತಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹೀನಾಯ ಸ್ಥಿತಿಯಲ್ಲಿವೆ. ವಿದ್ಯೆ, ಆಸ್ತಿ, ಅಂತಸ್ತು ಮತ್ತು ರಾಜಕೀಯ ಅಧಿಕಾರದ ನಿರಾಕರಣೆಯಿಂದಾಗಿ ತಳಸಮುದಾಯದ ಜನರು ಮೇಲ್ವರ್ಗ ಮತ್ತು ಮೇಲ್ಜಾತಿಯ ಗುಲಾಮರಂತೆ ಬದುಕುತ್ತಿರುವುದು ಇತಿಹಾಸವೇ ಸರಿ. ಹಿಂದುಳಿದ ವರ್ಗದವರ ಬದುಕಿಗೆ ಅರ್ಥಕೊಡಲು ಹಾಗೂ ಅವರನ್ನು ಮುಖ್ಯ ವಾಹಿನಿಯಲ್ಲಿ ತರಲು ಮೈಸೂರನ್ನು ಆಳಿದ ಅರಸರು ಮೀಸಲಾತಿಯನ್ನು ಜಾರಿಗೆ ತಂದು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದು ಹಿಂದುಳಿದ ವರ್ಗಗಳ ಶಕ್ತಿ ಮತ್ತು ಧ್ವನಿಯಾಗಿ ಕಾರ್ಯನಿರ್ವಹಿಸಿದ್ದುದು ಇತಿಹಾಸ.

1881ರಿಂದ 1894ರವರೆಗೆ ಮೈಸೂರು ಸಂಸ್ಥಾನವನ್ನು ಮಹಾರಾಜ ಶ್ರೀ ಹತ್ತನೇ ಚಾಮರಾಜ ಒಡೆಯರ್‌ರವರು ಆಳುತ್ತಿದ್ದರು. ಮಹಾರಾಜರು 1891ರಲ್ಲಿ ಸ್ವಾಮಿ ವಿವೇಕಾನಂದರನ್ನು ಮೈಸೂರಿಗೆ ಆಹ್ವಾನಿಸಿದ್ದರು. ಆಗ ವಿವೇಕಾನಂದರು **'ವಂಶಪಾರಂಪರಿಕವಾಗಿ ಬ್ರಾಹ್ಮಣರು ಓದಿನಲ್ಲಿ ಮುಂದಿದ್ದಾರೆ. ಆದ್ದರಿಂದ ಅವರ ವಿದ್ಯೆಗೆ ಹಣ ವ್ಯಯ ಮಾಡಬೇಡಿ, ಅದೇ ಹಣವನ್ನು ಹೊಲೆ ಮಾದಿಗರ ಶಿಕ್ಷಣಕ್ಕಾಗಿ ಖರ್ಚು ಮಾಡಿ, 50 ವರ್ಷ ಎಲ್ಲಾ ದೇವರುಗಳನ್ನು ಮರೆತು ದೀನ–ದಲಿತರ ಉದ್ಧಾರ ಮಾಡಿ'** ಎಂದು ತಮ್ಮ ಮನದಾಳದ ಮಾತನ್ನು ಹೇಳುತ್ತಾರೆ.

ವಿವೇಕಾನಂದರ ಮಾತಿಗೆ ಅನುಗುಣವಾಗಿ ಮಹಾರಾಜರು 1890ರಲ್ಲಿ ಆನೇಕಲ್, ಮಳವಳ್ಳಿ, ನರಸಾಪುರ ಮತ್ತು ನೂಲುಕುಂಟೆಗಳಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಪಂಚಮ ಶಾಲೆಗಳನ್ನು ಪ್ರಾರಂಭಿಸುತ್ತಾರೆ. 1916ರ ಹೊತ್ತಿಗೆ ಅಸ್ಪೃಶ್ಯರಿಗಾಗಿ 12 ಶಾಲೆಗಳನ್ನು ಪ್ರಾರಂಭಿಸಿ ಮೈಸೂರಿನ ಮಹಾರಾಣಿ, ವಾಣಿ ವಿಲಾಸ ಮಹಿಳಾ ಪ್ರೌಢಶಾಲೆಯಲ್ಲಿ ಅಸ್ಪೃಶ್ಯರ ಸಮಾವೇಶವನ್ನು ಮಹಾರಾಜರು ಆಯೋಜಿಸುತ್ತಾರೆ. ಅದರ ಅಧ್ಯಕ್ಷತೆಯನ್ನು ಹೊಲೇರ ಗೋಪಾಲಸ್ವಾಮಿ ಅಯ್ಯರ್ ವಹಿಸಿದ್ದರು.

1831ರಿಂದ 1910 ಅಂದರೆ ಸುಮಾರು 80 ವರ್ಷಗಳವರೆಗೆ ಮೈಸೂರು ಪ್ರಾಂತ್ಯದಲ್ಲಿ ತಮಿಳು ಮತ್ತು ಮೈಸೂರು ಬ್ರಾಹ್ಮಣರ ಮಧ್ಯೆ ಅಧಿಕಾರಕ್ಕಾಗಿ ಕಿತ್ತಾಟ ನಡೆಯುತ್ತಿತ್ತು. ಶೇಕಡ 4ರಷ್ಟು ಇರುವ ಬ್ರಾಹ್ಮಣರು ಶೇಕಡ 70ರಷ್ಟು ಹುದ್ದೆಗಳನ್ನು ಆಡಳಿತ ಮತ್ತು ರಾಜಕೀಯದಲ್ಲಿ ಪಡೆದು ಪ್ರಾಬಲ್ಯ ಮೆರೆಯುತ್ತಿದ್ದರು. 1881ರಿಂದ 1918ರವರೆಗೆ 37 ವರ್ಷಗಳ ಕಾಲ ಮೈಸೂರನ್ನು ಆಳಿದ ದಿವಾನರು ಬ್ರಾಹ್ಮಣರೇ ಆಗಿದ್ದರು. ಹೀಗಾಗಿ ಬ್ರಾಹ್ಮಣೇತರರು ಬ್ರಾಹ್ಮಣರ ಮೇಲೆ ಸಾಕಷ್ಟು ಆಕ್ರೋಶಗೊಂಡಿದ್ದುದು ಸಹಜ. 1916ರಲ್ಲಿ ಬ್ರಾಹ್ಮಣೇತರ ನಾಯಕ ಶ್ರೀ ಬಸವಯ್ಯನವರು ಮೈಸೂರು ವಿಧಾನ ಪರಿಷತ್ತಿನಲ್ಲಿ ಒಂದು ವಿಧೇಯಕ ಮಂಡಿಸಿ ಹಿಂದುಳಿದ ಬ್ರಾಹ್ಮಣೇತರರ ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿ ಮೀಸಲಿಡಲು ಒತ್ತಾಯಿಸುತ್ತಾರೆ.

1918ರಲ್ಲಿ 'ಪ್ರಜಾಮಿತ್ರ' ಮಂಡಳಿ ಸ್ಥಾಪನೆಗೊಂಡು ಹಿಂದುಳಿದವರಿಗೆ ರಾಜಕೀಯ ವೇದಿಕೆಯಾಯಿತು. ಹಿಂದುಳಿದ ನಾಯಕರ ಹೋರಾಟದ ಫಲವಾಗಿ ಆಗಸ್ಟ್ 23, 1918ರಲ್ಲಿ ಜಸ್ಟೀಸ್ ಮಿಲ್ಲರ್ ಆಯೋಗ ನೇಮಕಗೊಂಡು ಹಿಂದುಳಿದವರ ಶಿಕ್ಷಣ, ಸರಕಾರಿ ಸೇವೆ ಮತ್ತು ರಾಜಕೀಯ ರಂಗದಲ್ಲಿ ಪ್ರಾತಿನಿಧ್ಯಕ್ಕೆ ಶಿಫಾರಸ್ಸು ಮಾಡುತ್ತದೆ.

1918ರಿಂದ 1930ರ ಕೇವಲ 13 ಜನ ಅಸ್ಪೃಶ್ಯರು ಸರಕಾರಿ ನೌಕರಿಯಲ್ಲಿದ್ದುದು ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಮಟ್ಟವನ್ನು ತೋರಿಸುತ್ತದೆ.

ಜಾತಿ ಆಧಾರಿತ ಮೀಸಲಾತಿಯನ್ನು ವಿರೋಧಿಸಿ ಸರ್. ಎಂ. ವಿಶ್ವೇಶ್ವರಯ್ಯನವರು ತಮ್ಮ ದಿವಾನ ಹುದ್ದೆಗೆ ರಾಜೀನಾಮೆ ಸಲ್ಲಿಸಿದಾಗ, ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಸೋದರಮಾವ ಎಂ.ಕಾಂತರಾಜ ಅರಸರನ್ನು ಮೈಸೂರು ದಿವಾನರನ್ನಾಗಿ ನೇಮಿಸಲಾಯಿತು. 1918ರಿಂದ 1956ರರವರೆಗೆ ಮಿಲ್ಲರ್ ಕಮಿಟಿಯ ಶಿಫಾರಸ್ಸುಗಳು ಜಾರಿಯಲ್ಲಿದ್ದುದು ಗಮನಾರ್ಹ

## ಏಕೀಕರಣೋತ್ತರ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಯೋಗಗಳು

| | |
|---|---|
| **ನಾಗನಗೌಡ ಸಮಿತಿ** (1960) | **ಚಿನ್ನಪ್ಪರೆಡ್ಡಿ ಆಯೋಗ** (1988) |
| **ಹಾವನೂರ ಆಯೋಗ** (1972) | **ಕಾಕಾ ಕಾಲೇಲ್ಕರ್ ಸಮಿತಿ ವರದಿ** (1953–1955) |
| **ವೆಂಕಟಸ್ವಾಮಿ ಆಯೋಗ** (1983) | **ಬಿ.ಪಿ. ಮಂಡಳ್ ಆಯೋಗ** (1978–1980) |

ರಾಷ್ಟ್ರ ಮಟ್ಟದ ಹಿಂದುಳಿದ ಪರ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಪರಸ್ಪರ ಕಚ್ಚಾಡಿ ಹಿಂದುಳಿದವರನ್ನು ಅನಾಥರನ್ನಾಗಿ ಮಾಡಿ ಅವರಿಗೆ ಯಾವುದೇ ಮೀಸಲಾತಿ ಸೌಲಭ್ಯ ದೊರಕದೆ ಎಲ್ಲ ರಂಗಗಳಲ್ಲೂ ಹಿಂದುಳಿದವರಾಗಿದ್ದಾರೆ. ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸಮಸ್ಯೆಗಳು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿ ಅವುಗಳ ನೈಜ ಪರಿಹಾರಕ್ಕೆ ಪ್ರಯತ್ನಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಸಾಮಾಜಿಕವಾಗಿ ಛಿದ್ರವಾಗಿ ದೇಶಾದ್ಯಂತ ಹರಿದು ಹಂಚಿಹೋಗಿರುವ ಶೇಕಡ 52ರಷ್ಟು ಹಿಂದುಳಿದವರು, ಶೇಕಡ 18ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಶೇಕಡ 8 ಧಾರ್ಮಿಕ ಅಲ್ಪಸಂಖ್ಯಾತರನ್ನು Social integration (ಸಾಮಾಜಿಕ ಐಕ್ಯತೆ) ಮತ್ತು Political polarization ರಾಜಕೀಯ ಧ್ರುವೀಕರಣ ಮಾಡುವ ಮೂಲಕ ಶೋಷಿತರಿಗೆ ಅಧಿಕಾರ ನೀಡಿ ಸಮತಾ ಸಮಾಜ ನಿರ್ಮಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ದಿನಾಂಕ 9 ಮತ್ತು 10–02–2018ರಂದು ಎರಡು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಏರ್ಪಡಿಸಲು ನಿರ್ಧರಿಸಲಾಗಿದೆ. ಈ ವಿಚಾರ ಗೋಷ್ಠಿಯಲ್ಲಿ ಖ್ಯಾತನಾಮರು, ನ್ಯಾಯಶಾಸ್ತ್ರ ವಿದ್ವಾಂಸರು, ಸಾಹಿತಿಗಳು ಹಾಗೂ ಹಿಂದುಳಿದ ವರ್ಗಗಳ ನಾಯಕರು ಭಾಗವಹಿಸುವರು, ತಾವು ಸಹ ಈ ವಿಚಾರ ಗೋಷ್ಠಿಯಲ್ಲಿ ತಮ್ಮ ಪ್ರಬುದ್ಧ ವಿಚಾರ ಮಂಡಿಸಲು ಕೋರುತ್ತೇನೆ.